ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1736/2017

| | | |
|---|---|---|
| ಸಾಕ್ಷಿದಾರರು ಹೆಸರು | : ಮಂಜು | ದಿನಾಂಕಃ 26.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಪುಟ್ಟಸ್ವಾಮಿಗೌಡ | |
| ವಯಸ್ಸು | : 39 ವರ್ಷ | |
| ಉದ್ಯೋಗ | : ಗಾರೆಕೆಲಸ | **CW-9** |
| ವಾಸಸ್ಥಳ | : ಮುತ್ತಿಗೆ ಗ್ರಾಮ | **PW-8** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿ ನಮ್ಮ ಊರಿನವರು. ಸುಮಾರು 5 ವರ್ಷಗಳ ಹಿಂದೆ ಬೆಳಿಗ್ಗೆ ಸುಮಾರು 11 ಗಂಟೆ ಸಮಯದಲ್ಲಿ ನಾನು ನಮ್ಮ ಊರಿನಿಂದ ಮೈಸೂರಿಗೆ ರೈಲಿನಲ್ಲಿ ಹೋಗಿದ್ದು, ಮೈಸೂರಿನ ರೈಲ್ವೆ ನಿಲ್ದಾಣದ ರೈಲ್ವೆ ಪೊಲೀಸರ ಕಛೇರಿಯಲ್ಲಿ ಆರೋಪಿ ನಾಗೇಶ್ ರವರು ಇದುದ, ನನ್ನನ್ನು ಕರೆದಿರುತ್ತಾರೆ. ನಾನು ಅಲಿಲಗೆ ಹೋದಾಗ ರೈಲ್ವೆ ಪೊಲೀಸರು ಎರಡು ಕಡೆ ನನ್ನ ಸಹಿಗಳನ್ನು ಪಡೆದುಕೊಂಡಿದ್ದು, ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿಃ10 ರ ಮಹಜರನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿಃ10(ಸಿ) ಎಂದು ಗುರುತಿಸಲಾಯಿತು. ನಿಪಿಃ10 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ದಿನಾಂಕಃ 03.06.2017 ರಂದು ಮಧ್ಯಾಹ್ನ 2.50 ರ ಸಮಯದಲ್ಲಿ ಮೈಸೂರಿನ ರೈಲ್ವೆ ಕಛೇರಿಯಲ್ಲಿ ಚಾಸಾ3 ರವರು ಆರೋಪಿಯನ್ನು ನೋಡಿ ಇವರೇ ದಿನಾಂಕಃ 25.04.2017 ರಂದು ರಾತ್ರಿ 10.40 ರ ಸಮಯದಲ್ಲಿ ತನ್ನ ಕೆಎ 09 ಇಜಿ 1697 ನೋಂದಣಿ ಸಂಖ್ಯೆಯ ಯಮಹಾ ಕ್ರಕ್ಸ್ ಬೈಕನ್ನು ಚಾಮರಾಜನಗರ ಕಡೆಯಿಂದ ಮತ್ತಿಗೆ ಗ್ರಾಮದ ಕಡೆಗೆ ಅಜಾಗರೂಕತೆಯಿಂದ ಮತ್ತು ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ರೈಲ್ವೆ ಗೇಟ್ ಸಂಖ್ಯೆ 47 ಕ್ಕೆ ಡಿಕ್ಕಿಪಡಿಸಿದರು ಎಂಬುದಾಗಿ ನನ್ನ ಸಮಕ್ಷಮ ಹಾಗೂ ಚಾಸಾ 10 ರವರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಿಪಿಃ10 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 30.06.2017 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿಃ13 ಎಂದು

ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಆರೋಪಿ ನನಗೆ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಸ್. ವಕೀಲರಿಂದಃ

ರೈಲ್ವೆ ಪೊಲೀಸರು ನನ್ನಿಂದ ಯಾವ ದಿನ ಸಹಿಗಳನ್ನು ಪಡೆದುಕೊಂಡಿದ್ದಾರೆ ಎಂಬುವುದು ನೆನಪಿಲ್ಲಾ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1736/2017

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಸೋಮ | ದಿನಾಂಕಃ 26.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಮಹದೇವಶೆಟ್ಟಿ | |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಕೂಲಿಕೆಲಸ ಮತ್ತು ಡ್ರೈವರ್ ಕೆಲಸ | **CW-7** |
| ವಾಸಸ್ಥಳ | : | ಕಾಳನಹುಂಡಿ ಗ್ರಾಮ | **PW-7** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿ ನನಗೆ ಗೊತ್ತಿಲ್ಲ. ಸುಮಾರು 4-5 ವರ್ಷಗಳ ಹಿಂದೆ ಬೆಳಿಗ್ಗೆ ಸುಮಾರು 11 ಗಂಟೆ ಸಮಯದಲ್ಲಿ ನಾನು ಪಣ್ಯದ ಹುಂಡಿ ರೈಲ್ವೆ ನಿಲ್ದಾಣಕ್ಕೆ ಹೋಗುತ್ತಿದ್ದಾಗ, ರೈಲ್ವೆ ಪೊಲೀಸರು ನನ್ನಿಂದ ಎರಡು ಮೂರು ಕಡೆ ಸಹಿಗಳನ್ನು ಪಡೆದುಕೊಂಡಿದ್ದು, ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನಿಪಿಃ11 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ11(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ಆರೋಪಿ ನನ್ನ ಮಾವ ಎಂದರೆ ಸರಿಯಲ್ಲ. ದಿನಾಂಕಃ 02.05.2017 ರಂದು ಆರೋಪಿ ರೈಲ್ವೆ ಗೇಟ್ ಗೆ ಅಪಘಾತ ಮಾಡಿದ ಸಂಬಂಧವಾಗಿ ರೈಲ್ವೆ ಪೊಲೀಸರು ಮೈಸೂರಿನ ತಮ್ಮ ಕಛೇರಿಗೆ ನನ್ನನ್ನು ಹಾಗೂ ಆರೋಪಿಯನ್ನು ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಮೈಸೂರಿನ ರೈಲ್ವೆ ಪೊಲೀಸರ ಕಛೇರಿಯಲ್ಲಿ ಆರೋಪಿಯು ತಾನು ದಿನಾಂಕಃ 24.05.2017 ರಂದು ರಾತ್ರಿ 10.40 ರಲ್ಲಿ ತನ್ನ ಕೆಎ 09 ಇಜಿ 1697 ನೋಂದಣಿ ಸಂಖ್ಯೆಯ ಯಮಹಾ ಕ್ರಕ್ಸ್ ಬೈಕನ್ನು ಚಾಮರಾಜನಗರ ಕಡೆಯಿಂದ ಮತ್ತಿಗೆ ಗ್ರಾಮದ ಕಡೆಗೆ ಅಜಾಗರೂಕತೆಯಿಂದ ಮತ್ತು ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ರೈಲ್ವೆ ಗೇಟ್ ಸಂಖ್ಯೆ 47 ಕ್ಕೆ ಡಿಕ್ಕಿಪಡಿಸಿದ್ದೇನೆ ಎಂಬುದಾಗಿ ನನ್ನ ಸಮಕ್ಷಮ ತಪ್ಪೊಪ್ಪಿಗೆ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 27.05.2017 ರಂದು ಈ ಬಗ್ಗೆ ನಾನು ರೈಲ್ವೆ ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿಃ12 ಎಂದು

ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಆರೋಪಿ ನನ್ನ ಮಾವನಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.